# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## ಪರೀಕ್ಷಾ ವಿಭಾಗ

ಫೋನ್ ನಂ. :0831-2565237/235
ಫ್ಯಾಕ್ಸ್ : 0831-2565240

Website: www.rcub.ac.in
E-mail: rcuregev@gmail.com


ಸಂಖ್ಯೆ : ರಾಚವಿ/ಪರೀಕ್ಷಾ ವಿಭಾಗ/ಬೆಳಗಾವಿ/2020-21/3910/2 ದಿನಾಂಕ: 27-01-2021

ಸುತ್ತೋಲೆ

ವಿಷಯ: 2020ರ ಮಾರ್ಚ ತಿಂಗಳಲ್ಲಿ ನಡೆಯಬೇಕಾಗಿದ್ದ ಬಿ.ಎಡ್ ಪದವಿಯ 1 ಮತ್ತು 3ನೇ ಸೆಮಿಸ್ಟರನ ರೆಗ್ಯೂಲರ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ಕೋವಿಡ್-19 ಪಿಡುಗಿನಿಂದಾಗಿ ನಡೆಸದೇ ಮುಂದಿನ ಸೆಮಿಸ್ಟರಕ್ಕೆ ಬಡ್ತಿ ನೀಡಿ ಫಲಿತಾಂಶ ಪ್ರಕಟಿಸಿರುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ ಇಡಿ/197/ಯು.ಎನ್.ಇ/2020 ದಿನಾಂಕ 10.07.2020
2. ವಿಶ್ವವಿದಯಾಲಯ ರಚಿಸಿದ ಸಮಿತಿಯ ವರದಿಯ ದಿನಾಂಕ: 14.12.2020
3.ವಿದ್ಯಾ ವಿಷಯಕ್ ಪರಿಷತ್ ಸಭೆಯ ಅನುಮೋದನೆ ದಿನಾಂಕ: 31.12.2020
4. ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ:31.12.2020
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 25.01.2021.

ಮೇಲ್ಕಾಣಿಸಿದ ವಿಷಯದನ್ವಯ, 2020ರ ಮಾರ್ಚ ತಿಂಗಳಲ್ಲಿ ನಡೆಯಬೇಕಾಗಿದ್ದ ಬಿ.ಎಡ್ ಪದವಿಯ 1 ಮತ್ತು 3ನೇ ಸೆಮಿಸ್ಟರನ ರೆಗ್ಯೂಲರ ವಿದ್ಯಾರ್ಥಿಗಳ ಪರೀಕ್ಷೆಗಳನ್ನು ಕೋವಿಡ್-19 ಪಿಡುಗಿನಿಂದಾಗಿ ಕರ್ನಾಟಕ ಸರ್ಕಾರ ನೀಡಿರುವ ಆದೇಶದನ್ವಯ ಹಾಗೂ ವಿಶ್ವವಿದ್ಯಾಲಯವು ರಚಿಸಿದ ಸಮಿತಿಯ ವರದಿಯನ್ವಯ ಸದರಿ ಸೆಮಿಸ್ಟರನ ಪರೀಕ್ಷೆಗಳನ್ನು ನಡೆಸದೇ ಪ್ರಥಮ ಸೆಮೆಸ್ಟರ್‌ನ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ಸದರಿ ಸೆಮೆಸ್ಟರ್‌ನಲ್ಲಿ ಪಡೆದ ಶೇ 100ರಷ್ಟು ಆಂತರಿಕ ಅಂಕಗಳನ್ನು ಪರಿಗಣಿಸಿ ಬಡ್ತಿಗೊಳಿಸಿದೆ. ಅದರಂತೆ ತೃತೀಯ ಸೆಮೆಸ್ಟರ್ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ಸದರಿ ಸೆಮೆಸ್ಟರ್‌ನಲ್ಲಿನ ಶೇ 50ರಷ್ಟು ಆಂತರಿಕ ಅಂಕಗಳನ್ನು ಹಾಗೂ ಹಿಂದಿನ ಸೆಮಸ್ಟರ್‌ನ ಫಲಿತಾಂಶದಲ್ಲಿ ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ಮುಂದಿನ ಸೆಮಿಸ್ಟರ್‌ಗೆ ಬಡ್ತಿಗೊಳಿಸಿ ಫಲಿತಾಂಶಗಳನ್ನು ಪ್ರಕಟಿಸಿದೆ. ಸದರಿ ಫಲಿತಾಂಶವನ್ನು ದಿನಾಂಕ: 28.01.2021 ರ ಸಂಜೆ 7.00 ಗಂಟೆಯ ನಂತರ Student Portal ಮೂಲಕ ವಿದ್ಯಾರ್ಥಿಗಳು ಹಾಗೂ ಓಯಾಸಿಸ್ ಮೂಲಕ ಕಾಲೇಜಿನ ಪ್ರಾಂಶುಪಾಲರು ಪಡೆದು, ಸದರಿ ವಿಷಯವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ತಿಳಿಸಲು ಸೂಚಿಸಲಾಗಿದೆ.

27.1.21

ಕುಲಸಚಿವರು(ಮೌಲ್ಯಮಾಪನ)
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಇವರಿಗೆ,

- ಪ್ರಾಚಾರ್ಯರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಧೀನದಲ್ಲಿ ಬರುವ ಎಲ್ಲ ಶಿಕ್ಷಣ ಮಹಾವಿದ್ಯಾಲಯಗಳಿಗೆ,
- ಮಾನ್ಯ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ. ಬೆಳಗಾವಿ. ವಿಜಯಪುರ ಮತ್ತು ಬಾಗಲಕೋಟೆ ಮಾಹಿತಿಗಾಗಿ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
2. ಮಾನ್ಯ ಕುಲಸಚಿವರು(ಆಡಳಿತ) ಆಪ್ತ ಕಾರ್ಯದರ್ಶಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
3. ಮಾನ್ಯ ಆಪ್ತ ಕಾರ್ಯದರ್ಶಿಗಳು, ಹಣಕಾಸು ಅಧಿಕಾರಿಗಳು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
4. ಮುಖ್ಯಸ್ಥರು, www.rcub.ac.in website ನಲ್ಲಿ ಪ್ರಕಟಿಸಲು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
5. ರಕ್ಷಾ ಪ್ರತಿ.